## ಹತ್ತು ಲಕ್ಷಕ್ಕೆ ಸಹಿ!



ಒಬ್ಬ ಮಂತ್ರಿ ಜ್ಯೋತಿಷಿ ಹತ್ತಿರ ಹೋಗಿ, 'ನನ್ನ ಮಗ ಪಿಯುಸಿ ಓದುತ್ತಿದ್ದಾನೆ. ಅವನ ಮುಂದಿನ ಭವಿಷ್ಯ ಏನಾಗಬಹುದು' ಎಂದು ಕೇಳಿದ. ಜ್ಯೋತಿಷಿ ಮಂತ್ರಿ ಮಗನ ಜಾತಕ ಪರಿಶೀಲಿಸಿ, ಹೇಗಿದ್ದರೂ ದುಡ್ಡು ಕೊಟ್ಟು ವೈದ್ಯಕೀಯ ಸೀಟು ಪಡೆಯುತ್ತಾರೆ ಎಂದು ಭಾವಿಸಿ, 'ಮುಂದೆ ನಿಮ್ಮ ಮಗ ವೈದ್ಯನಾಗುತ್ತಾನೆ' ಎಂದು ಹೇಳಿದ.

ಇದನ್ನು ಕೇಳಿದ ಮಂತ್ರಿ ಖುಷಿಯಾಗಿ, ತನ್ನ ಮಡದಿಯನ್ನು ಕರೆದು ಜ್ಯೋತಿಷಿಗೆ ಹತ್ತು ಲಕ್ಷ ರೂಪಾಯಿಯ ಚೆಕ್ ಕೊಡಿಸಿದ. ಚೆಕ್ ಪಡೆದ ಜ್ಯೋತಿಷಿ ಅದನ್ನು ಪರಿಶೀಲಿಸಿ, 'ಈ ಚೆಕ್‌ನಲ್ಲಿ ನಿಮ್ಮ ಸಹಿಯೇ ಇಲ್ಲವಲ್ಲ' ಎಂದಾಗ, ಮಂತ್ರಿ 'ನನ್ನ ಮಗ ಪಾಸಾಗುವುದೇ ಕಷ್ಟ. ಅದರಲ್ಲಿ ನೀವು ವೈದ್ಯನಾಗುತ್ತಾನೆ ಎಂದು ಹೇಳಿದ್ದೀರಿ. ಅವನಿಗೆ ವೈದ್ಯಕೀಯ ಸೀಟು ಸಿಕ್ಕಾಗ ನಿಮಗೆ ಕೊಟ್ಟಿರುವ ಚೆಕ್‌ಗೆ ಸಹಿ ಹಾಕಿ ಕೊಡುತ್ತೇನೆ' ಎಂದು ಹೇಳಿದಾಗ ಜ್ಯೋತಿಷಿ ತಲೆ ತಿರುಗಿ ಬೀಳುವುದೊಂದೇ ಬಾಕಿ.

**ವೇಣುಗೋಪಾಲ್ ಸಿ.**

## ಸೂರ್ಯನಿಗೂ ಶೀತ ಆಗಿರಬೇಕು!



ನನ್ನ ನಾಲ್ಕು ವರ್ಷದ ಮೊಮ್ಮಗಳು ನೆಗಡಿ, ಕೆಮ್ಮಿನಿಂದ ಬಳಲುತ್ತಿದ್ದಳು. ಆ ದಿನ ವಾತಾವಾರಣವೂ ಅಷ್ಟು ಅನುಕೂಲಕರವಾಗಿರಲಿಲ್ಲ. ಚುಮುಚುಮು ಚಳಿಯೂ ಇತ್ತು. ಕಾರ್ಮೋಡ ಕವಿದಿತ್ತು. ಆದ್ದರಿಂದ ಅವಳನ್ನು ಅಂದು ಶಿಶುಪಾಲನಾ ಕೇಂದ್ರಕ್ಕೆ ಕಳಿಸದಿರಲು ನಿರ್ಧರಿಸಿದೆವು.

ತಡವಾಗಿ ಎದ್ದ ಮೊಮ್ಮಗಳನ್ನು ಹುರಿದುಂಬಿಸಲು, 'ನೀನೇ ಮೊದಲು ಎದ್ದಿರುವೆ ಪುಟ್ಟಿ; ಸೂರ್ಯ ಇನ್ನೂ ಎದ್ದೇ ಇಲ್ಲ' ಎಂದೆ. 'ಸೂರ್ಯನಿಗೂ ಶೀತ ಆಗಿರಬೇಕು! ಅದಕ್ಕೇ ಇನ್ನೂ ಎದ್ದಿಲ್ಲ' ಎಂದು ಥಟ್ಟನೆ ಉತ್ತರಿಸಿದ ಅವಳ ಸಮಯ ಪ್ರಜ್ಞೆ ನನ್ನನ್ನು ಮೂಕವಿಸ್ಮಿತನನ್ನಾಗಿಸಿತು.

**ಮಂಜುನಾಥ ಡಿ.ಎಸ್.**